ಟಿ.ಎಂ. ವಿಜಯ ಭಾಸ್ಕರ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
**T.M. VIJAY BHASKAR, I.A.S.**
**Principal Secretary to Government**

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**Karnataka Government Secretariat**
**Rural Development & Panchayat Raj Department**

ನಂ.ಗ್ರಾಅಪ:01:ಸುಗ್ರಾಯೋ:2014 (ಕೆಆರ್ಐಡಿಎಲ್) ದಿನಾಂಕ:06.01.2014.

ಪ್ರಿಯ ಶ್ರೀ ಪ್ರಕಾಶ್,

ವಿಷಯ: ನಿಗಮದ ವತಿಯಿಂದ ಕೈಗೊಳ್ಳುತ್ತಿರುವ ಕಾಮಗಾರಿಗಳನ್ನು ಮೂರೂ ಹಂತಗಳಲ್ಲಿ ಗುಣಮಟ್ಟದ ತಪಾಸಣೆ ಮಾಡಿ ಉತ್ತಮ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ) ಇವರ ಅಧಿಸೂಚನೆ ಸಂಖ್ಯೆ: ಆಇ 1172 ವೆಚ್ಚ 12/12, ದಿನಾಂಕ: 13.03.2013.

***

ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಹಾಗೂ ಇತರೆ ಇಲಾಖೆಗಳ ನಿರ್ಮಾಣ ಕಾಮಗಾರಿಗಳನ್ನು ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕೈಗೆತ್ತಿಕೊಂಡು ಅನುಷ್ಠಾನ ಮಾಡುತ್ತಿರುವುದು ಸ್ವಯಂವೇದ್ಯವಾಗಿರುತ್ತದೆ.

ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ರೂ.1.00 ಕೋಟಿ ಮೊತ್ತದೊಳಗಿನ ಕಾಮಗಾರಿಗಳನ್ನು ಟೆಂಡರ್ ಕರೆಯದೆ ಕರ್ನಾಟಕ ಪಾರದರ್ಶಕ ನಿಯಮಗಳ 4G ವಿನಾಯಿತಿಯನ್ನು ಪಡೆದಿರುವುದರಿಂದ ನಿಗಮವು ವಹಿಸಿಕೊಳ್ಳುವ ನಿರ್ಮಾಣದ ಕಾಮಗಾರಿಗಳ ಸಂಖ್ಯೆಯೂ ಸಹ ಹೆಚ್ಚಿರುತ್ತದೆ. ನಿಗಮವು ವಹಿಸಿಕೊಂಡು ಅನುಷ್ಠಾನಕ್ಕೆ ತರುತ್ತಿರುವ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಕಾರಾತ್ಮಕ ಹಾಗೂ ನಕಾರಾತ್ಮಕ ಅಭಿಪ್ರಾಯಗಳನ್ನು ಜನಪ್ರತಿ ನಿಧಿಗಳು ವ್ಯಕ್ತ ಮಾಡುತ್ತಿರುವುದು ಸಹ ಕಂಡು ಬರುತ್ತಿರುವುದು ಸಹಜವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ನಿಗಮವು ಕಾಮಗಾರಿ ಅನುಷ್ಠಾನ ಮಾಡುವ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ವ್ಯಾಪ್ತಿಗೆ ಬರುವ "ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ"ವು ತನ್ನ ಕಾಮಗಾರಿಗಳ ಅನುಷ್ಠಾನದಲ್ಲಿ ಅಳವಡಿಸಿಕೊಂಡಿರುವ ಮೂರೂ ಸ್ಥರದ ಗುಣನಿಯಂತ್ರಣ ತನಿಖಾ ವ್ಯವಸ್ಥೆಯನ್ನು ಹಾಗೂ ಗುಣನಿಯಂತ್ರಣ ಪ್ರಾಯೋಗಾಲಯಗಳನ್ನು ನಿಗಮವು ಸಹ ಅಳವಡಿಸಿಕೊಳ್ಳುವುದು ಪ್ರಸ್ತುತ ಸಂದರ್ಭದಲ್ಲಿ ಅವಶ್ಯವಿರುತ್ತದೆ.

ಆದ್ದರಿಂದ ನಿಗಮದ ವತಿಯಿಂದ ನಿರ್ಮಾಣ ಮಾಡುವ ಕಾಮಗಾರಿಗಳ ಅನುಷ್ಠಾನದಲ್ಲಿ ಕೆಆರ್‌ಆರ್‌ಡಿಎ ಮಾದರಿಯಲ್ಲಿ 3 ಹಂತದ ಗುಣಮಟ್ಟ ಪರಿವೀಕ್ಷಣಾ ವ್ಯವಸ್ಥೆಯನ್ನು ದಿನಾಂಕ: 01.02.2014 ರೊಳಗೆ ಜಾರಿಗೊಳಿಸಿ ಗುಣಾತ್ಮಕ ಬದಲಾವಣೆಯನ್ನು ತರುವಲ್ಲಿ ಪಾರದರ್ಶಕ ಕ್ರಮಗಳನ್ನು ಹಾಗೂ ಗುಣನಿಯಂತ್ರಣ ಕಾಯ್ದುಕೊಳ್ಳಲು ಕೋರಲಾಗಿದೆ. ತನ್ಮೂಲಕ ಸಂಸ್ಥೆಯ ಹೆಸರನ್ನು ಶ್ರೀಸಾಮಾನ್ಯರು ಹಾಗೂ ಜನಪ್ರತಿನಿಧಿಗಳು ಗುಣಾತ್ಮಕವಾಗಿ ಗುರುತಿಸುವಂತೆ ಮಾಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ,

(ಸಹಿ) 6/1/14

ಶ್ರೀ ಹೆಚ್.ಸಿ. ಪ್ರಕಾಶ್,ಐಎಫ್‌ಎಸ್.,
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್,
ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.

ಬಹುಮಹಡಿ ಕಟ್ಟಡ, 3ನೇ ಮಹಡಿ, 3ನೇ ಗೇಟ್, ಬೆಂಗಳೂರು-560 001. M.S. Building, 3rd Floor, Gate No. 3, Bangalore-560 001.
Tel. : 080-2235 3929 / 2203 2446 Fax : 080 - 2235 3927
e-mail: prsrdpr@karnataka.gov.in / principalsecretaryrdpr@gmail.com Website : www.rdpr.kar.nic.in